# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. :31 ಪ್ರಾ.ಸಾ. : 14**

| | | |
|---|---|---|
| ಸಾಕ್ಷಿಯ ಹೆಸರು | : | ಅರವಿಂದ ಗಜಾನನ ಶಾನಭಾಗ |
| ತಂದೆಯ ಹೆಸರು | : | ಗಜಾನನ ಶಾನಭಾಗ |
| ವಯಸ್ಸು | : | 72 ವರ್ಷ |
| ಕೆಲಸ | : | ಇಲ್ಲ |
| ವಾಸ | : | ಗ್ರೀನ್‌ಸ್ಟ್ರೀಟ್, ಕಾರವಾರ |

**ದಿನಾಂಕಃ 22-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಹೀಗೆ ಸುಮಾರು 10-15 ವರ್ಷಗಳಿಂದ ಕಾರವಾರದ ನಗರಸಭೆಯ ಗಾಂಧಿ ಮಾರ್ಕೇಟ್ ನಲ್ಲಿ ಸ್ಟೇಷನರಿ ಅಂಗಡಿ ನಡೆಸುತ್ತಿದ್ದೆ, ಆದರೆ ಈಗ 2 ½ ವರ್ಷಗಳ ಹಿಂದೆ ಕಾರವಾರದ ನಗರಸಭೆಯವರು ನಾನು ಅಂಗಡಿ ನಡೆಸುತ್ತಿದ್ದ ಕಟ್ಟಡವನ್ನು ಕೆಡವಿರುತ್ತಾರೆ. ನಮ್ಮ ಅಂಗಡಿಯಲ್ಲಿ ದೇವರ ಪೂಜಾ ಸಾಮಾನುಗಳು, ಕತ್ತಿ, ಚಾಕು, ಕರಿಮಣಿ, ಈಳಗಿ ಹಾಗೂ ಇತರೇ ಗೃಹ ಸಾಮಗ್ರಿಗಳನ್ನು ಮಾರಾಟ ಮಾಡುತ್ತಿರುತ್ತೇವೆ.

2. 2018 ನೇ ಇಸ್ವಿಯಲ್ಲಿ ಕಾರವಾರ ಪೊಲೀಸರು ಇಬ್ಬರನ್ನು ಕರೆದುಕೊಂಡು ನಮ್ಮ ಅಂಗಡಿಯ ಬಳಿ ಬಂದು, "ತಮ್ಮ ಜೊತೆ ಕರೆದುಕೊಂಡ ಬಂದಿದ್ದ ಆ ಎರಡು ವ್ಯಕ್ತಿಗಳು ನಿಮ್ಮ ಅಂಗಡಿಯಲ್ಲಿ ಕತ್ತಿಯನ್ನು ಖರೀದಿಸಿರುತ್ತಾರೆ, ಆದ್ದರಿಂದ ಅವರನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದೇವೆ" ಎಂದು ಹೇಳಿರುತ್ತಾರೆ. ಪೊಲೀಸರ ಜೊತೆ ಬಂದಿದ್ದ ಆ ಎರಡು ಜನರು ನಮ್ಮ ಅಂಗಡಿಯನ್ನು ತೋರಿಸಿ, ತಾವು ಇದೇ ಅಂಗಡಿಯಲ್ಲಿ ಕತ್ತಿಯನ್ನು ಖರೀದಿಸಿರುವುದಾಗಿ ಹೇಳಿರುತ್ತಾರೆ, ಆದರೆ ನಮ್ಮ ಅಂಗಡಿಗೆ ಸಾಕಷ್ಟು ಜನರು ಬಂದು ವಸ್ತುಗಳನ್ನು ಖರೀದಿ ಮಾಡುವುದರಿಂದ ಯಾರು-ಯಾರು, ಯಾವಾಗ ಏನು ಖರೀದಿ ಮಾಡಿ ಹೋಗಿರುತ್ತಾರೆ ಎಂದು ನಮಗೆ ಹೇಳಲು ಬರುವುದಿಲ್ಲ ಎಂದು ಹೇಳಿರುತ್ತೇನೆ. ನಂತರ ಪೊಲೀಸರು ಅಲ್ಲಿ ಬರವಣಿಗೆ ಮಾಡಿಕೊಂಡು ಹೋಗಿರುತ್ತಾರೆ. ಆ ನಂತರ ಪೊಲೀಸರ ಜೊತೆ ಬಂದಿದ್ದ ಆ ಎರಡು

ಜನರು ನಮ್ಮ ಅಂಗಡಿಯಿಂದ ಕತ್ತಿಯನ್ನು ಖರೀದಿ ಮಾಡಿ, ಯಾರನ್ನೊ ಕೊಲೆ ಮಾಡಿರುತ್ತಾರೆ ಎಂದು ನನಗೆ ತಿಳಿದು ಬಂತು. ಆರೋಪಿಗಳು ಖರೀದಿಸಿದ ಕತ್ತಿಯನ್ನು ಪೊಲೀಸರು ನನಗೆ ತೋರಿಸಿರುವುದಿಲ್ಲ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಸಾಕ್ಷಿಗೆ ತೋರಿಸಲಾಗಿ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ.

3. ಈಗ ಸಾಕ್ಷಿಗೆ ಒಂದು ಪೋಟೋ ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಅಂಗಡಿಯು ತನ್ನ ಅಂಗಡಿ ಎಂದು ಗುರುತಿದ್ದು, ಸದರಿ ಪೋಟೋವನ್ನು ನಿಪಿ–42 ಎಂದು ಗುರುತಿಸಲಾಯಿತು. ನಿಪಿ–42 ಪೋಟೋವನ್ನು ಪೊಲೀಸರು ಆರೋಪಿಗಳನ್ನು ನಮ್ಮ ಅಂಗಡಿಯ ಬಳಿ ಕರೆದುಕೊಂಡು ಬಂದಾಗ ತೆಗೆದ ಪೋಟೋ ಆಗಿರುತ್ತದೆ. ಮುದ್ದೆ ಮಾಲು–1 ಕತ್ತಿಯನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಮ್ಮ ಅಂಗಡಿಯಲ್ಲಿ ಮಾರಾಟ ಮಾಡುವ ಕತ್ತಿಗಳನ್ನು ನಾವು ಹುಬ್ಬಳ್ಳಿಯಿಂದ ತರಿಸಿ, ಮಾರಾಟ ಮಾಡುತ್ತೇವೆ ಎಂದು ನುಡಿಯುತ್ತಾರೆ. ಈ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿದ್ದು, ನನಗೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

4. ದಿಃ 28–10–2018 ರಂದು ಪೊಲೀಸರು ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಹಾಗೂ ನ್ಯಾಯಾಲಯದ ವಿ.ಸಿ ಯಲ್ಲಿರುವ 3 ನೇ ಆರೋಪಿಯನ್ನು ಕರೆದುಕೊಂಡು ಬಂದಿದ್ದರು ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಆ ದಿನ ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ನಮ್ಮ ಅಂಗಡಿಯ ಬಳಿ ಕರೆದುಕೊಂಡು ಬಂದಾಗ, 2 ನೇ ಆರೋಪಿಯು ತಾನು ದಿಃ 16–10–2018 ರಂದು ರೂ.150/– ಗಳನ್ನು ನೀಡಿ, ಒಂದು ಕತ್ತಿಯನ್ನು ಖರೀದಿ ಮಾಡಿದ್ದೆ ಎಂದು ಹೇಳಿರುತ್ತಾನೆ ಎಂದರೆ ಸರಿ. ಆಗ ನಾನು ಸಹ 2 ನೇ ಆರೋಪಿ ಖರೀದಿ ಮಾಡಿ ಹೋಗಿರುತ್ತಾನೆ ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯತ್ತಾರೆ. ನಿಪಿ–42 ಪೋಟೋದಲ್ಲಿ ಕಾಣುತ್ತಿರುವ 2 ನೇ ಆರೋಪಿಯನ್ನು ನೋಡಿ ಸಾಕ್ಷಿಯು ಇದೇ ವ್ಯಕ್ತಿಯನ್ನು ಪೊಲೀಸರು ಆ ದಿನ ನಮ್ಮ

ಅಂಗಡಿಗೆ ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು 2 ಮತ್ತು 3 ನೇ ಆರೋಪಿಗಳನ್ನು ನಮ್ಮ ಅಂಗಡಿಯ ಬಳಿ ಕರೆದುಕೊಂಡು ಬಂದ ಬಗ್ಗೆ ನಾನು ದಿಃ 28-10-2018 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯತ್ತಾರೆ. ಸದರಿ ಹೇಳಿಕೆಯಲ್ಲಿ ಸಾಕ್ಷಿಯು ನೆನಪಿಲ್ಲ ಎಂದು ಹೇಳಿದ ಭಾಗವನ್ನು ನಿಪಿ-43 ಎಂದು ಗುರುತಿಸಲಾಯಿತು.

5. ಆ ನಂತರ ದಿಃ 31-12-2018 ರಂದು ಕಾರವಾರ ಪೊಲೀಸರು ನನ್ನನ್ನು ಕಾರವಾರದ ಮೆಡಿಕಲ್ ಕಾಲೇಜ್ ಗೆ ಕರೆಸಿ, ಅಲ್ಲಿ ನನಗೆ ಮುದ್ದೆ ಮಾಲು-1 ಕತ್ತಿಯನ್ನು ಗುರುತಿಸಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ಮುದ್ದೆ ಮಾಲು-1 ಕತ್ತಿಯನ್ನು ನೋಡಿ, ಇದು ನನ್ನ ಅಂಗಡಿಯಿಂದಲೇ ಖರೀದಿಸಿದ ಕತ್ತಿ ಎಂದು ಹೇಳಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅಲ್ಲಿ 2 ಮತ್ತು 3 ನೇ ಆರೋಪಿಗಳು, 1 ನೇ ಆರೋಪಿಯ ಮಾತು ಕೇಳಿ, ನಮ್ಮ ಅಂಗಡಿಯಿಂದ ಖರೀದಿ ಮಾಡಿದ ಕತ್ತಿಯಿಂದ ಪ್ರೇಮಕುಮಾರನನ್ನು ಕೊಲೆ ಮಾಡಿ, ನಂತರ ಕತ್ತಿಯನ್ನು ಗಣೇಶ ಗುಡಿಯ ಕಾಳಿ ನದಿಯಲ್ಲಿ ಬಿಸಾಡಿದ್ದು, ನಂತರ ಪೊಲೀಸರು ಸದರಿ ಕತ್ತಿಯನ್ನು ಹುಡುಕಿಸಿ, ಜಪ್ತುಪಡಿಸಿ, ತದನಂತರ ಅದನ್ನು ಎಫ್.ಎಸ್.ಎಲ್ ಗೆ ಕಳುಹಿಸಿ, ವಾಪಸ್ ಬಂದ ನಂತರ ನಾನು ಸದರಿ ಕತ್ತಿಯನ್ನು ಕಾರವಾರದ ಮೆಡಿಕಲ್ ಕಾಲೇಜ್‌ನಲ್ಲಿ ನೋಡಿ ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಕತ್ತಿಯನ್ನು ಮೆಡಿಕಲ್ ಕಾಲೇಜ್‌ನಲ್ಲಿ ನೋಡಿ ಗುರುತಿಸಿದ ಬಗ್ಗೆ ದಿಃ 31-12-2018 ರಂದು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ಕತ್ತಿಯನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹೇಳಿಕೆಯನ್ನು ನಿಪಿ-44 ಎಂದು ಗುರುತಿಸಲಾಯಿತು. ಮುದ್ದೆ ಮಾಲು-1 ಕತ್ತಿಯನ್ನು 2 ಮತ್ತು 3 ನೇ ಆರೋಪಿಗಳು ನಮ್ಮ ಅಂಗಡಿಯಿಂದ ಖರಿದಿ ಮಾಡಿದ್ದರೂ ಸಹ ಹಾಗೂ ಅದನ್ನು ನೋಡಿ ಗುರುತಿಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನೆನಪಿಲ್ಲ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ**

6. ಕಾರವಾರ ನಗರ ಸಭೆಯ ಮಳಿಗೆಯಲ್ಲಿ ನಮಗೆ ಸೇರಿದ ಅಂಗಡಿ ಇದ್ದ ಬಗ್ಗೆ ಪೊಲೀಸರು ನನ್ನಿಂದ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಅಂಗಡಿ ನಡೆಸಲು ಕಾರವಾರ ನಗರ ಸಭೆಯಿಂದ ಪಡೆದುಕೊಂಡ ಪರವಾನಗಿ ಪತ್ರವನ್ನು ಪೊಲೀಸರು ಪಡೆದುಕೊಂಡಿರುವುದಿಲ್ಲ. ನಾನು ಮೊದಲಿಗೆ ಕಾರವಾರ ನಗರ ಸಭೆಯಿಂದ ಬೆಣ್ಣೆ ಮಾರಾಟದ ಅಂಗಡಿ ನಡೆಸಲು ಲೈಸೆನ್ಸ್ ಪಡೆದುಕೊಂಡಿರುತ್ತನೇ ಹಾಗೂ ಅದೇ ಲೈಸೆನ್ಸ್ ನಿಂದ ನಾನು ಅಂಗಡಿಯನ್ನು ಮುಂದುವರೆಸಿರುತ್ತೆನೆ. ನನ್ನ ಮೂಲ ವ್ಯಾಪಾರ ಬೆಣ್ಣೆ ವ್ಯಾಪಾರ ಆಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಂತರದಲ್ಲಿ ಬೆಣ್ಣೆ ವ್ಯಾಪಾರ ಬಂದ್ ಮಾಡಿ, ನಂತರ ನಾವು ಪೂಜಾ ಸಾಮ್ರಾಗ್ರಿಗಳು, ಚಾಕು, ಕತ್ತಿ, ಈಳಗಿ, ಇತರೇ ಗೃಹ ಉಪಯೋಗಿ ವಸ್ತುಗಳು ಹಾಗೂ ಹಾರ್ಡವೇರ್ ಸಾಮಾನುಗಳು ಮಾರಾಟ ಮಾಡುತ್ತಾ ಬಂದಿರುತ್ತೇವೆ.

7. ಬೆಣ್ಣೆ ವ್ಯಾಪಾರ ಬಂದ್ ಮಾಡಿ, ಇತರೇ ವ್ಯಾಪಾರವನ್ನು ಪ್ರಾರಂಭಿಸಿದ ಬಗ್ಗೆ ನಾವು ಕಾರವಾರ ನಗರ ಸಭೆಯವರಿಗೆ ತಿಳಿಸಿರುವುದಿಲ್ಲ. ನನ್ನ ಅಂಗಡಿಯನ್ನು ನಗರ ಸಭೆಯವರು ಕೆಡುವ ಸಮಯದಲ್ಲಿ ಬೆಣ್ಣೆ ಅಂಗಡಿ ಇತ್ತು ಎಂದರೆ ಸರಿಯಲ್ಲ. ನಾನು ನಗರ ಸಭೆಗೆ ಬಾಡಿಗೆ ನೀಡುವಾಗ ಬೆಣ್ಣೆ ಅಂಗಡಿಯ ಬಾಡಿಗೆ ಎಂದು ಹಣ ಪಾವತಿಸುತ್ತಾ ಬಂದಿರುವುದಿಲ್ಲ, ಆದರೆ ಪ್ರತಿ ವರ್ಷ ನನ್ನ ಅಂಗಡಿಯ ಲೈಸೆನ್ಸ್ ನ್ನು ಬೆಣ್ಣೆ ಅಂಗಡಿಯ ಲೈಸೆನ್ಸ್ ಎಂದೇ ನವೀಕರಣ ಮಾಡುತ್ತಾ ಬಂದಿರುತ್ತೇನೆ ಎಂದರೆ ಸರಿ. ಮುದ್ದೆ ಮಾಲು-1 ಕತ್ತಿಯನ್ನು ನಾವು ಮಾರಾಟ ಮಾಡಿರುತ್ತೇವೆ. ಈ ರೀತಿಯ ಕತ್ತಿಗಳನ್ನು ಕಾರವಾರದಲ್ಲಿ ಇತರರು ಮಾರಾಟ ಮಾಡುತ್ತಾರೆ ಎಂದರೆ ಸರಿ. ಮುದ್ದೆ ಮಾಲು-1 ಕತ್ತಿಯನ್ನು ನಮ್ಮ ಅಂಗಡಿಯಿಂದಲೇ ಮಾರಾಟ ಮಾಡಿರುತ್ತೇವೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಖರೀದಿಸಿರಲುಬಹುದು ಅಥವಾ ಖರೀದಿಸದೆ ಇರಬಹುದು ಎಂದು ನುಡಿಯುತ್ತಾರೆ.

8. ಆ ದಿನ ನಮ್ಮ ಅಂಗಡಿಯ ಬಳಿಕರೆದುಕೊಂಡು ಬಂದ 2 ವ್ಯಕ್ತಿಗಳನ್ನು ನಾನು ಈ ಮೊದಲು ನೋಡಿರುವುದಿಲ್ಲ. ಈ ಮೊದಲು ನಾನು ಆ ವ್ಯಕ್ತಿಗಳನ್ನು ನೋಡಿದರ ಕಾರಣ, ಇವರೇ ನಮ್ಮ ಅಂಗಡಿಯಿಂದ ಕತ್ತಿಯನ್ನು ಖರೀದಿಸಿ ಹೋಗಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ಪೊಲೀಸರು ಆ 2 ವ್ಯಕ್ತಿಗಳನು ಕರೆದುಕೊಂಡು ಬಂದಾಗ ಯಾವ ವಿಷಯನ್ನು ಹೇಳಿರುತ್ತಾರೋ, ಆ ವಿಷಯವನ್ನು ಬಿಟ್ಟು ನನಗೆ ಬೇರೆ ಏನು ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ನಮ್ಮ ಅಂಗಡಿಯ ಬಳಿ ಬಂದು, ಬರವಣಿಗೆ ಮಾಡಿ, ಪೋಟೋ

ತೆಗೆದಿದ್ದರಿಂದ ಹಾಗೂ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಂತೆ ಹೇಳಿದ್ದರಿಂದ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಪೊಲೀಸರು ಸಮನ್ಸ್ ಜಾರಿ ಮಾಡಿದ್ದರಿಂದ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಪೊಲೀಸರು ಆ ದಿನ ನಮ್ಮ ಅಂಗಡಿಯ ಬಳಿ ಬಂದಾಗ ಏನು ಬರವಣಿಗೆ ಹಾಗೂ ಯಾವ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ನಿಪಿ–42 ಪೋಟೋವನ್ನು ಪೊಲೀಸರು ಯಾವ ಕಾರಣಕ್ಕಾಗಿ ತೆಗೆದರು ಎಂದು ಗೊತ್ತಿಲ್ಲ ಎಂದರೆ ಸಾಕ್ಷಿಯು ಆರೋಪಿಗಳು ನಮ್ಮ ಅಂಗಡಿಯಿಂದ ಕತ್ತಿಯನ್ನು ಖರೀದಿ ಮಾಡಿದ ಬಗ್ಗೆ ಪೋಟೋ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳು ನಮ್ಮ ಅಂಗಡಿಯಲ್ಲಿ ಕತ್ತಿಯನ್ನು ಖರೀದಿ ಮಾಡಿದ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಪೊಲೀಸರ ಮಾತು ಕೇಳಿ, ಆ ದಿನ ಪೊಲೀಸರು 2 ಜನ ಆರೋಪಿಗಳನ್ನು ಕರೆದುಕೊಂಡು ಬಂದು, ಬರವಣಿಗೆ ಮಾಡಿ, ಪೋಟೋ ತೆಗೆದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ